ಸಿ. ಸಿ. ನಂ.- **526/22**

ಪಿ.ಡಬ್ಲ್ಯೂ. **2**

ಸಾಕ್ಷಿಯು ದಿನಾಂಕ- **06-03-2026** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀಸವಾಲು- ಆರೋಪಿ ಪರ ಶ್ರೀ ಸಿ ಎಂ ಕೆ ವಕೀಲರಿಂದ</u> -

ನನಗೆ ದೂರುದಾರರು **15** ವರ್ಷಗಳಿಂದ ಪರಿಚಯ ಇರುತ್ತಾರೆ. ನನ್ನ ಸಹೋದ್ಯೋಗಿಯಾದ ಚಂದ್ರು ಎನ್ನುವವರಿಂದ ನನಗೆ ದೂರುದಾರರ ಪರಿಚಯ ಇರುತ್ತದೆ. ನಾನು ಹೊಸಪೇಟೆಗೆ ಪ್ರವಾಸಕ್ಕೆಂದು ಬಂದಾಗಲೆಲ್ಲಾ ನಾನು ದೂರುದಾರರನ್ನು ಭೇಟಿಯಾಗುತ್ತಿದ್ದೆ. ನನಗೆ ಆರೋಪಿಯು ಸುಮಾರು **12-13** ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿಗಿಂತ ದೂರುದಾರರು ನನಗೆ ಹೆಚ್ಚು ಆತ್ಮೀಯರು ಎಂದರೆ ಸರಿ. ದೂರುದಾರರು ಆರೋಪಿಗೆ ಸಾಲ ಕೊಡುವಾಗ ನೀವು ಅಲ್ಲಿ ಹಾಜರಿದ್ದೀರಾ ಎಂದು ತೋರಿಸಲು ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಸಾಲ ಪಡೆಯುವಾಗ ಆರೋಪಿಯು ಒಂದು ಪ್ರಾಂಸರಿ ಪತ್ರ ಬರೆದುಕೊಟ್ಟಿದ್ದರು, ಅದಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ರೂ.**10** ಲಕ್ಷ ಸಾಲವನ್ನು ದೂರುದಾರರಿಂದ ಯಾವ ದಿನಾಂಕದಂದು ಕೇಳಿದ್ದರು ಎಂದು ನನಗೆ ನಿಖರವಾಗಿ ನೆನಪಿಲ್ಲ. ಡಿಸೆಂಬರ್ **2019** ರಲ್ಲಿ ಆರೋಪಿಯು ದೂರುದಾರರಿಂದ ಸಾಲ ಪಡೆದಿದ್ದರು. ಪ್ರಾಂಸರಿ ಪತ್ರವನ್ನು ಆರೋಪಿಯು ಶಾನಭಾಗ ಹೋಟೇಲ್ ನಲ್ಲಿ ದೂರುದಾರರಿಂದ ಹಿಂಪಡೆದು ಒಂದು ಚೆಕ್ ನ್ನು ನನ್ನ ಸಮಕ್ಷಮ ಕೊಟ್ಟಿದ್ದರು. ಆ ಸಮಯದಲ್ಲಿ ನಾನು, ದೂರುದಾರರು, ಆರೋಪಿ ಮಾತ್ರ ಇದ್ದೇವು. ರೂ.**10** ಲಕ್ಷ ಸಾಲದ ಮುಖಬೆಲೆ ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ಮುಂದುವರೆದು, ರೂ.**500** ಮುಖಬೆಲೆಯ ನೋಟುಗಳು ಇದ್ದವು ಎಂದು ನುಡಿಯುತ್ತಾರೆ. ಹೀಗೆ ರೂ.**500** ಮುಖಬೆಲೆಯ ನೋಟುಗಳನ್ನು **10** ಕಟ್ಟಿನಲ್ಲಿ ದೂರುದಾರರು ಆರೋಪಿಗೆ ಕೊಟ್ಟರು. ಚೆಕ್ ನ್ನು ಕೊಡುವಾಗ ಫೋಟೋ ತೆಗೆಯುವುದಾಗಲೀ, ಪತ್ರ ಬರೆಸುಕೊಳ್ಳುವುದಾಗಲೀ ಮಾಡಿರುತ್ತೀರಾ ಎಂದರೆ ಇಲ್ಲ. ರೂ.**10** ಲಕ್ಷ ಸಾಲ ಕೊಡುವಷ್ಟು ಅರ್ಥಿಕ ಸಾಮರ್ಥ ದೂರುದಾರರಲ್ಲಿ ಇಲ್ಲ ಎಂದರೆ ಸಾಕ್ಷಿ ಅವರಿಗೆ ನಾವು ಫೋನ ಮುಖಾಂತರ ಕೇಳಿದಾಗ ಹಣ ಹೊಂದಿಸಿಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ದೂರುದಾರರು ಹೇಗೆ ಹಣ ಹೊಂದಿಸಿರುತ್ತಾರೆ ಎಂದು ನಾನು ಅವರನ್ನು

ಕೇಳಿಲ್ಲ. ಆರೋಪಿಯು ರೂ.10 ಲಕ್ಷ ಸಾಲವನ್ನು ನನಗೆ ಮೊದಲಿಗೆ ಕೇಳಿದ್ದರು ಎಂದರೆ ಸರಿ. ನನಗೆ ಆರೋಪಿಯ ವಿರುದ್ಧ ಹಳೇ ದ್ವೇಷ ಇರುವುದರಿಂದ ದೂರುದಾರರ ಮುಖಾಂತರ ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.